info@buntsanghablr.com
buntsanghabangalore@yahoo.in

# ಸ್ನೇಹ ಚಿಂತನೆ

ಮಾಸ ಪತ್ರಿಕೆ

ಜುಲೈ 2025
ಸಂಪುಟ–21, ಸಂಚಿಕೆ–7

ಸಂಚಿಕೆ ಬೆಲೆ ರೂ. 1/–



ಬಂಟರ ಸಂಘ ಬೆಂಗಳೂರು ಮತ್ತು ಚಿನ್ಮಯ ಮಿಷನ್ ಸಂಯುಕ್ತ ಆಶ್ರಯದಲ್ಲಿ ನಡೆದ ಗೀತಾ ಜ್ಞಾನ ಯಜ್ಞ




ಮಹಿಳಾ ವಿಭಾಗ– ವಿಚಾರ ಸಂಕಿರಣ ಕಾರ್ಯಕ್ರಮ



ಯೋಗ ಹಾಗೂ ವಿಶ್ವ ಸಂಗೀತ ದಿನಾಚರಣೆ




ಕರ್ನಾಟಕ ಮತ್ತು ಗೋವಾ ರೀಜನಲ್ ಅಂತರ್ ಶಾಲಾ ಮಟ್ಟದ ಚೆಸ್ ಪಂದ್ಯಾವಳಿ

ನಗು ಬದುಕಿನ ಜೀವ ಸೆಲೆ

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

# 324, Bunts' Sangha Complex, Chord Road,
Vijayanagar, Bengaluru - 560040. Karnataka.
Phone : 080-23399323 | 23399636
Email : info@buntsanghablr.com


ವೈವಾಹಿಕ ಜೀವನದ ಸುವರ್ಣ ವಾರ್ಷಿಕೋತ್ಸವದ
ಶುಭಾಶಯಗಳು
ಸುಮಧುರ ವೈವಾಹಿಕ ಜೀವನದ 50 ಸಂವತ್ಸರ ಪೂರೈಸಿದ
ಶ್ರೀಮತಿ ಕುಸುಮ ಎಸ್. ಶೆಟ್ಟಿ ಮತ್ತು ಶ್ರೀಯುತ ಶೇಖರ ಶೆಟ್ಟಿ ದಂಪತಿಗಳಿಗೆ
ಜೀವನದಲ್ಲಿ ಸುಖ, ಶಾಂತಿ, ಸಮೃದ್ಧಿ, ದೀರ್ಘಾಯುಷ್ಯ, ಉತ್ತರೋತ್ತರ ಶ್ರೇಯೋಭಿವೃದ್ಧಿ
ದೊರೆಯಲೆಂದು ಶ್ರೀ ದೇವರಲ್ಲಿ ಪ್ರಾರ್ಥಿಸುತ್ತೇವೆ. ದೇವರ ಕೃಪೆ ಸದಾ ನಿಮ್ಮೊಂದಿಗಿರಲಿ.
ಶ್ರೀಮತಿ ಕುಸುಮ ಎಸ್. ಶೆಟ್ಟಿ
ಕವಲ್‌ಕೊಡ್ಲು, ಮೊಳಹಳ್ಳಿ
ಶ್ರೀ ಶೇಖರ ಶೆಟ್ಟಿ
ಅಬ್ಲಾಡಿ ಹೊಸಮನೆ
ವೈವಾಹಿಕ ಜೀವನದ
50 ನೇ
ವಾರ್ಷಿಕೋತ್ಸವ
ಶುಭ ಕೋರುವವರು
ಮನೆಯವರು,
ಬಂಧುಗಳು ಹಾಗು ಮಿತ್ರರು

ADVT.

# ಸ್ನೇಹ ಚಿಂತನೆ

*Monthly Magazine Published by*

**BUNTS' SANGHA BANGALORE**

VOL - 21 JULY - 2025 ISSUE - 7

**ಸಾಹಿತ್ಯ ಪ್ರಕಾಶನ ಸಮಿತಿ**

ಚೇರ್‌ಪರ್ಸನ್ ಮತ್ತು ಗೌರವ ಸಂಪಾದಕರು:
ಶ್ರೀ ರವೀಂದ್ರ ಶೆಟ್ಟಿ ಹಟ್ಟಿಯಂಗಡಿ

**ಸಹ ಸಂಪಾದಕರು:**
ಶ್ರೀ ದೀಪಕ್ ಜೆ. ಶೆಟ್ಟಿ

**ಗೌರವ ಸಲಹೆಗಾರರು:**
ಶ್ರೀ ಎಂ. ಮುರಲೀಧರ ಹೆಗ್ಡೆ
ಶ್ರೀ ಬಾಲಕೃಷ್ಣ ಶೆಟ್ಟಿ (ಎಬಿ ಶೆಟ್ಟಿ)
ಡಾ. ದೀಪಕ್ ಶೆಟ್ಟಿ

**ಸಂಪಾದಕೀಯ ಮಂಡಳಿ**
ಶ್ರೀಮತಿ ನಿರ್ಮಲ ಸಿ. ರೈ
ಶ್ರೀ ಪ್ರಸಾದ್ ಶೆಟ್ಟಿ ಸೀತಾನದಿ
ಶ್ರೀಮತಿ ಸ್ಮಿತಾ ಬಲ್ಲಾಳ್
ಶ್ರೀ ಸತೀಶ್ ಶೆಟ್ಟಿ ವಕ್ವಾಡಿ
ಶ್ರೀ ಸಂದೀಪ್ ಹೆಗ್ಗದ್ದೆ
ಶ್ರೀಮತಿ ಶ್ಯಾಮಲ ಶೆಟ್ಟಿ

**ಪತ್ರಿಕಾ ಸಲಹಾ ವಿಭಾಗ:**
ಸಮಾಜ ಸೇವೆ ವಿಭಾಗ: ಶ್ರೀ ಜಯರಾಮ ಶೆಟ್ಟಿ ನೂಜಾಡಿ
ಕಾನೂನು ಸಲಹೆಗಾರರು: ಶ್ರೀಮತಿ ಸುಪ್ರೀತಾ ಕೆ. ಶೆಟ್ಟಿ
ಆರೋಗ್ಯ ಮಾಹಿತಿ ವಿಭಾಗ: ಡಾ. ಶಾಲ್ಮಲೀ ಸುರೇಶ್
ಮನೋರಂಜನಾ ವಿಭಾಗ: ಶ್ರೀಮತಿ ರೇವತಿ ಶೆಟ್ಟಿ
ಶೈಕ್ಷಣಿಕ ವಿಭಾಗ: ಶ್ರೀಮತಿ ನಂದಿನಿ ನಾಗರಾಜ್ ಶೆಟ್ಟಿ
ಕ್ರೀಡಾ ವಿಭಾಗ: ಶ್ರೀ ನವೀನ್ ಶೆಟ್ಟಿ

**ಪೋಷಕ ಸದಸ್ಯರು:**
ಶ್ರೀಮತಿ ಮನೋರಮ ಚೌಟ
ಶ್ರೀಮತಿ ವೇದ ಎಸ್. ಶೆಟ್ಟಿ
ಶ್ರೀ ಬಿ. ಕುಸುಮಾಕರ ಶೆಟ್ಟಿ
ಶ್ರೀ ಆರ್.ಎಸ್. ಶೆಟ್ಟಿ
ಶ್ರೀಮತಿ ವಸಂತಿ ಪಿ. ಶೆಟ್ಟಿ
ಶ್ರೀ ಪ್ರಕಾಶ್ ಶೆಟ್ಟಿ
ಶ್ರೀ ಎ. ಜೆ. ಶೆಟ್ಟಿ
ಶ್ರೀಮತಿ ಗೀತ ಭಗವಾನ್‌ದಾಸ್ ರೈ
ಶ್ರೀ ಶ್ರೀನಿವಾಸ ಸೂಡ

**ಪ್ರಕಾಶಕರು:**
ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿ

## ಒಳ ಪುಟಗಳಲ್ಲಿ.....

| | ಪುಟ |
|---|---|
| ಸಂಪಾದಕೀಯ | 2 |
| ಅಧ್ಯಕ್ಷರ ಮಾತು | 3 |
| ಗೌರವ ಕಾರ್ಯದರ್ಶಿಯವರ ವರದಿ | 4 |
| ರಕ್ತದಾನ ಚಟುವಟಿಕೆಗಳಲ್ಲಿ ಮನೆ ಮಾತಾಗಿರುವ ರೆಡ್ ಕ್ರಾಸ್ ಸಂಸ್ಥೆ | 5 |
| Bunts' Sangha R.N.S Vidyaniketan - I | 7 |
| Report on Environment Day Celebration - 2025 | |
| Bunts' Sangha RNS Vidyaniketan - I Chess Championship | 8 |
| ಬಂಟರ ಸಂಘ ಬೆಂಗಳೂರು – ಮಹಿಳಾ ವಿಭಾಗ | 9 |
| Bunts' Sangha R.N.S Vidyaniketan - I Report on Fr. George Hess SJ, Memorial Literary Competition, 2025 | 10 |
| Bunts' Sangha R.N.S Vidyaniketan - I Report on Inter School Yoga Competition, CBSE | 11 |
| ವೈದ್ಯಕೀಯ ಮತ್ತು ವಿಮಾ ಸಮಿತಿ – 2024–26 | 12 |
| ವಿವಾಹ ವೇದಿಕೆ ಸಮಿತಿ "ಬಂಧ – ಅನುಬಂಧ" – ರಕ್ಷಾ ಬಂಧನ ಕಾರ್ಯಕ್ರಮ | 14 |
| Report on International Yoga Day and World Music Day Celebratiom | 16 |
| ವಿದ್ಯಾರ್ಥಿವೇತನ ಮತ್ತು ಪ್ರಶಸ್ತಿ ಸಮಿತಿ ವಿದ್ಯಾರ್ಥಿವೇತನ ಯೋಜನೆ – 'ವಿದ್ಯಾ ದೀವಿಗೆ' | 18 |

### ಮುಖ ಪುಟ

ಬಂಟರ ಸಂಘ ಬೆಂಗಳೂರು ಮತ್ತು ಚಿನ್ಮಯ ಮಿಷನ್ ಸಂಯುಕ್ತ ಆಶ್ರಯದಲ್ಲಿ ನಡೆದ ಗೀತಾ ಜ್ಞಾನ ಯಜ್ಞ

ಮಹಿಳಾ ವಿಭಾಗ– ವಿಚಾರ ಸಂಕಿರಣ ಕಾರ್ಯಕ್ರಮ

ಯೋಗ ಹಾಗೂ ವಿಶ್ವ ಸಂಗೀತ ದಿನಾಚರಣೆ

ಕರ್ನಾಟಕ ಮತ್ತು ಗೋವಾ ರೀಜನಲ್ ಅಂತರ್ ಶಾಲಾ ಮಟ್ಟದ ಚೆಸ್ ಪಂದ್ಯಾವಳಿ

ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ. – ಸಂಪಾದಕ ಮಂಡಳಿ

# ಸಂಪಾದಕೀಯ



## ನಗು–ಬದುಕಿನ ಜೀವಸೆಲೆ

'ನಗುವುದು ಸಹಜ ಧರ್ಮ, ನಗಿಸುವುದು ಪರಧರ್ಮ' ಎನ್ನುವ ಮಾತಿನಂತೆ 'ನಗು' ಒಂದು ಹಿತವಾದ ಅನುಭವ. ನಗು ಚೆಲ್ಲದ ಬದುಕು ಬೆಂಗಾಡಿನಂತೆ. ನಗುವಿನಲ್ಲಿ ಬದುಕಿನ ಜೀವಸೆಲೆ ಇದೆ. ನಗು ಮಾನವನ ಅತೀ ಉತ್ತಮ ಹಾಗೂ ಆಕರ್ಷಣೀಯ ಮುಖ ಲಕ್ಷಣ. ಮುಖದಲ್ಲಿ ಮಿನುಗುವ ಮುಗುಳ್ನಗೆಯನ್ನು ಮೋಡಗಳ ಮರೆಯಿಂದ ನುಸುಳಿ ಬರುವ ಸೂರ್ಯ ರಶ್ಮಿಗೆ ಹೋಲಿಸಲಾಗಿದೆ. ಹೆಣ್ಣಿನ ಮುಖದಲ್ಲಿ ಲಾಸ್ಯವಾಡುವ ನಸುನಗು ಅವಳು ಧರಿಸುವ ಯಾವ ಬೆಲೆಬಾಳುವ ಒಡವೆಗಳಿಗಿಂತಲೂ ಹೆಚ್ಚು ಪ್ರಕಾಶಮಾನವಾದದ್ದು. ಇದರಿಂದಾಗಿಯೇ 'ನಕ್ಕರದೇ ಸ್ವರ್ಗ' ಎನ್ನುವ ಮಾತಿಗೆ ಸರಿಹೊಂದುವ ಮಾತು ಎಲ್ಲಾ ಭಾಷೆಯಲ್ಲೂ ಪ್ರಚಲಿತದಲ್ಲಿರುವುದು. ನಗುವಿನ ಮಹತ್ವ ತಿಳಿದೇ ಇರಬೇಕು smile a while ಎಂದು ಹಿರಿಯರನೇಕರು ಹೇಳುತ್ತಾ ಬಂದಿರುವುದು.

ಜೀವನದಲ್ಲಿ ನೋವುಗಳು ಅನಿವಾರ್ಯ. ಈ ಅನಿವಾರ್ಯ ನೋವುಗಳನ್ನು ಮರೆತು ನಗಬಲ್ಲವನು ಭೂಮಿಯಲ್ಲಿಯೇ ಸ್ವರ್ಗವನ್ನು ನಿರ್ಮಿಸಬಲ್ಲವನಾಗುತ್ತಾನೆ. ಜೀವನದ ನೋವುಗಳನ್ನು ನುಂಗಿ ನಗುನಗುತ್ತಾ ಜೀವನವನ್ನು ಎದುರಿಸುವುದರಲ್ಲಿ ಬದುಕಿನ ಸಾರ್ಥಕತೆಯಿದೆ. ಅಳು ನಮಗೆ ಮಾತ್ರ. ಆದರೆ ನಗು ಎಲ್ಲರಿಗೆ ಎನ್ನುವ ಸತ್ಯವನ್ನು ಮನವರಿಕೆ ಮಾಡಿಕೊಂಡಾಗ ಯಾರ ಮುಖದಲ್ಲೇ ಆಗಲಿ ಮಂಧ್ಮುತ ಮಿನುಗುವುದು. ನಗುವಿನ ಮಹತ್ವ ತಿಳಿದೇ ಹಿರಿಯರು "ನಗುನಗುತ್ತಾ ಬಾಳಿ" ಎಂದು ಆಶೀರ್ವದಿಸುವುದಿರಬೇಕು. ನಗು ಒಂದು ಸಂಜೀವಿನಿ. ವೈದ್ಯಕೀಯವಾಗಿಯೂ ಅದಕ್ಕೆ ಅದರದ್ದೇ ಮಹತ್ವವಿದೆ. ದೇಹದ ಬಿಗಿದುಕೊಂಡ ಸ್ನಾಯುಗಳನ್ನು, ನರಗಳನ್ನು ಸಡಿಲಿಸಿ, ನೋವಿನ, ಸೋಲಿನ ಭಾವನೆಗಳನ್ನು, ಮಾನಸಿಕ ಒತ್ತಡಗಳನ್ನು ಶಾಂತಗೊಳಿಸುವ ಗುಣ ನಗುವಿಗಿದೆ. ಯಾವ ಬಿಗಿ ಪರಿಸ್ಥಿತಿಯಲ್ಲೂ ಮನತುಂಬಿ ನಕ್ಕಾಗ ಎಲ್ಲ ನೋವುಗಳನ್ನೂ ಮರೆಯುವುದು ಸಾಧ್ಯವಾಗುತ್ತದೆ. ಕಾಡುವ ನೋವುಗಳಿಂದ ದೂರವಾಗುವುದು ಮಾನಸಿಕ ಹಾಗೂ ದೈಹಿಕ ದೃಷ್ಟಿಯಿಂದ ಆರೋಗ್ಯಕರ. ಮಕ್ಕಳಂತೂ ಅಳುವಿನ ಮಧ್ಯೆ ಒಮ್ಮೆ ನಕ್ಕರೆ ತಮಗರಿವಿಲ್ಲದಂತೆ ತಮ್ಮ ನೋವನ್ನೆಲ್ಲಾ ಮರೆತೇ ಬಿಡುತ್ತಾರೆ.

ನಗುವಿಗೊಂದು ಸಮ್ಮೋಹಕ ಗುಣವಿದೆ. ನಗುವುದು ಒಂದು ಕಲೆ. ಬೇರೆಯವರನ್ನು ನಗಿಸುವುದು ಇನ್ನೂ ದೊಡ್ಡ ಕಲೆ. ಎರಡೂ ದೈವದತ್ತವಾದುದು. ಇತರರನ್ನು ನಗಿಸುವ ಕಲೆಯಲ್ಲಿ ಪಳಗಿದ ಮಂದಿ ಅತಿ ವಿರಳ. ಅವರೆಲ್ಲಿದ್ದರೂ ಕೂಡಲೇ ತಿಳಿಯುತ್ತದೆ. ಏಕೆಂದರೆ ಸಿಹಿಗೆ ಇರುವೆ ಮುತ್ತಿದಂತೆ ಅಂತಹ ವ್ಯಕ್ತಿಗಳ ಸುತ್ತಲೂ ಜನರು ಮುತ್ತುತ್ತಿರುತ್ತಾರೆ. ಅಲ್ಲಿ ನಗುವಿನ ಸದ್ದು ಸದಾ ಕೇಳಿಬರುತ್ತಿರುತ್ತದೆ. ಹಾಸ್ಯಗಾರರು, ನಗಿಸುವವರು, ನಗೆ ಬರಹಗಾರರು, ನಗೆ ನಟರು, ಇವರೆಲ್ಲಾ ಜನರನ್ನು ನಗಿಸಲೆಂದೇ ಹುಟ್ಟಿದವರು. ಮಾತಲ್ಲಿ, ಬರಹದಲ್ಲಿ, ನಟನೆಯಲ್ಲಿ ನಗಿಸುವವರನ್ನು ಜನರು ಎಂದಿಗೂ ಮರೆಯುವುದಿಲ್ಲ. ಹೀಗೆ ನಗಿಸುವವರಿಂದ ಜನರ ಮಾನಸಿಕ ಒತ್ತಡ ಬಹಳಷ್ಟು ಕಡಿಮೆಯಾಗುವುದೆಂದು ಹೇಳಬಹುದು. ಇದೇ ಕಾರಣಕ್ಕೆ ಇರಬಹುದು ಹಿಂದಿನ ರಾಜರ ಆಸ್ಥಾನಗಳಲ್ಲಿ ಹಾಸ್ಯವನ್ನು ಉಕ್ಕಿಸುವ ವಿಕಟಕವಿಗಳನ್ನು ಇಟ್ಟುಕೊಂಡಿರುತ್ತಿದ್ದುದು. ಈಗ ಆ ಕೆಲಸವನ್ನು ಹಾಸ್ಯಕೂಟಗಳು ನಗೆಕೂಟಗಳು ಮಾಡುತ್ತಿವೆ. ನಗಲೆಂದೇ ನಡೆಸುವ ಇಂತಹ ಕಾರ್ಯಕ್ರಮಗಳಿಗೆ ಜನ ಮುಗಿಬಿದ್ದು ಸೇರುತ್ತಾರೆ. ಮನತುಂಬಿ ನಕ್ಕಾಗ ಬೇರೆಲ್ಲಾ ಕಹಿ ಭಾವನೆಗಳು ಮರೆಯಾಗುತ್ತವೆ.

ಸುತ್ತು ಮುತ್ತಲ ಜನರ ಮೇಲೆ ಒಳ್ಳೆಯ ಪ್ರಭಾವ ಬೀರುವ ಮೊದಲ ಅಸ್ತ್ರವೆಂದರೆ ನಗು. ಉದಾಹರಣೆಗೆ, ಒಂದು ಸಮಾರಂಭಕ್ಕೆ ಹೋಗುತ್ತೇವೆದುಕೊಳ್ಳಿ. ಅಲ್ಲಿ ಎಲ್ಲರ ಪರಿಚಯ ನಮಗಿರುವುದಿಲ್ಲ. ಪರಿಚಯವಿದ್ದ ಕೆಲವು ಮಂದಿ ಎಲ್ಲೆಲ್ಲೋ ಕುಳಿತಿರುತ್ತಾರೆ. ನಾವು ಅಪರಿಚಿತರ ಮಧ್ಯೆಯೇ ಕುಳಿತಿರಬೇಕಾಗುತ್ತದೆ. ಆಗ ಮುಖವನ್ನು ಗಂಟು ಹಾಕಿಕೊಂಡು ನಮಗಿಲ್ಲಿ ಯಾರ ಪರಿಚಯವೂ ಇಲ್ಲ ಎಂದು ಕುಳಿತರೆ ಮುಳ್ಳಿನ ಮೇಲೆ ಕುಳಿತಂತಾಗುತ್ತದೆ. ಅದಕ್ಕೆ ಬದಲಾಗಿ ಮುಖದ ಸ್ನಾಯುಗಳನ್ನು ಸ್ವಲ್ಪ ಸಡಿಲಿಸಿ, ಪಕ್ಕದಲ್ಲಿ ಕುಳಿತವರ ಕಡೆ ನೋಡಿ ಒಂದು ಮುಗುಳ್ನಗೆ ಚೆಲ್ಲಿದರೆ ವಾತಾವರಣವೇ ಬದಲಾಗುತ್ತದೆ. ಅವರೂ ನಮ್ಮನ್ನು ನೋಡಿ ನಗೆ ಚೆಲ್ಲುತ್ತಾರೆ. ಆ ನಗುವಿನಲ್ಲಿ ಒಂದು ಸ್ನೇಹಸೇತುವೆ ನಿರ್ಮಾಣವಾಗುತ್ತದೆ. ಕೆಲವೇ ಕ್ಷಣಗಳಲ್ಲಿ ಗೆಳೆತನ ಬೆಳೆಯುತ್ತದೆ. ಪರಸ್ಪರ ಪರಿಚಯವಾಗುತ್ತದೆ. ಹೊತ್ತು ಕಳೆದ ಪರಿವೆಯಾಗುವುದಿಲ್ಲ. ಹೀಗೆ ನಕ್ಕು ಸ್ನೇಹ ಬೆಳೆಸುವ ಗುಣ ಕೆಲವರಲ್ಲಿ ಹುಟ್ಟಿನಿಂದ ಬೆಳೆದು ಬಂದಿರುತ್ತದೆ. ಹಾಗಿಲ್ಲವಾದಲ್ಲಿ ಸ್ವಲ್ಪ ಪ್ರಯತ್ನದಿಂದ ಬೆಳೆಸಿಕೊಳ್ಳುವುದು ಸಾಧ್ಯ. ಒಂದೆರಡು ಬಾರಿಯ ಪ್ರಯತ್ನ ಸಾಕು. ಮತ್ತೆ ಆ ಕಲೆ ನಮ್ಮದಾಗುತ್ತದೆ.

ನಾನು ನಕ್ಕರೆ ಜಗತ್ತು ನಿನ್ನೊಂದಿಗೆ ನಗುವುದು. ನಗು ನಮಗೆ ನೈಸರ್ಗಿಕವಾಗಿ ಒದಗಿಬಂದ ವರದಾನ. ಎಷ್ಟೇ ಆಭರಣ ಧರಿಸಿದರೂ ನಗುವಿಲ್ಲದ ಮೊಗದಲ್ಲಿ ಸೊಬಗಿರದು ಎಂಬುದನ್ನು ಎಲ್ಲರೂ ಅರ್ಥೈಸಿಕೊಂಡು ಬಾಳೋಣ.

**ರವೀಂದ್ರ ಶೆಟ್ಟಿ ಹಟ್ಟಿಯಂಗಡಿ**
**ಸಂಪಾದಕರು**

# ಅಧ್ಯಕ್ಷರ ಮಾತು



**"ಶಿಕ್ಷಣವೇ ನಿಜವಾದ ಸಂಪತ್ತು".**

**ಶಿಕ್ಷಣದಿಂದ ಜ್ಞಾನ ವೃದ್ಧಿಯಾಗುತ್ತದೆ ಮತ್ತು ಜ್ಞಾನದಿಂದ ವ್ಯಕ್ತಿಯು ಉತ್ತಮ ಜೀವನವನ್ನು ನಡೆಸಲು ಸಾಧ್ಯವಾಗುತ್ತದೆ".**

**ಪ್ರೀತಿಯ ಸಮಾಜ ಬಾಂಧವರೇ,**

ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಬಹಳ ಅರ್ಥಪೂರ್ಣವಾಗಿ ವಿಜೃಂಭಣೆಯಿಂದ ಆಚರಿಸಲಾಯಿತು.

ವಿದ್ಯಾರ್ಥಿಗಳಲ್ಲಿ ಭಾಷಾ ಬೆಳವಣಿಗೆಯ ಕೌಶಲ್ಯವನ್ನು ಹೆಚ್ಚಿಸುವ ದೃಷ್ಟಿಯಿಂದ ಅಂತರ್‌ಶಾಲಾ ಕ್ರಿಯಾತ್ಮಕ ಬರಹ ಸ್ಪರ್ಧೆಯನ್ನು ದಿನಾಂಕ 20.06.2025 ರಂದು ಮತ್ತು ದಿನಾಂಕ 26.06.2025 ರಂದು ಕರ್ನಾಟಕ ಮತ್ತು ಗೋವಾ ರೀಜನಲ್ ಅಂತರ್‌ಶಾಲಾ ಚದುರಂಗ ಕ್ರೀಡಾ ಸ್ಪರ್ಧೆಯನ್ನು ಏರ್ಪಡಿಸಿದ್ದು, ನಗರದ ಪ್ರತಿಷ್ಠಿತ ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿ ಈ ಅವಕಾಶವನ್ನು ಸದುಪಯೋಗಪಡಿಸಿಕೊಂಡರು. ನಮ್ಮ ಶಾಲೆಯ ವಿದ್ಯಾರ್ಥಿಗಳು ಹಲವಾರು ಬಹುಮಾನಗಳನ್ನು ಪಡೆದುಕೊಂಡರು.

ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ ಶಾಲಾ ಆವರಣದಲ್ಲಿ ವಿಶ್ವ ಯೋಗ ದಿನಾಚರಣೆಯನ್ನು ಹಾಗೂ ವಿಶ್ವ ಸಂಗೀತ ದಿನಾಚರಣೆಯನ್ನು ದಿನಾಂಕ 21.06.2025ರಂದು ಆಚರಿಸಲಾಯಿತು. ಬಂಟರ ಸಂಘದ ಮಹಿಳಾ ವಿಭಾಗದ ವತಿಯಿಂದ ಮಹಿಳೆಯರಿಗಾಗಿ 'ಮಹಿಳೆಯರ ಆರೋಗ್ಯ'ದ ಬಗ್ಗೆ ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮವನ್ನು ಅತ್ಯಂತ ಅಚ್ಚುಕಟ್ಟಾಗಿ ಆಯೋಜಿಸಿದ ಮಹಿಳಾ ವಿಭಾಗದ ತಂಡಕ್ಕೆ ಅಭಿನಂದನೆಗಳು.

ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ– II ರ ವಿದ್ಯಾರ್ಥಿನಿಯರ ವಸತಿ ಕಟ್ಟಡದ ಕಾಮಗಾರಿಯು ಪೂರ್ಣಗೊಳ್ಳುವ ಹಂತಕ್ಕೆ ಬಂದಿದ್ದು, ಮುಂದಿನ ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳ್ಳಲಿದೆ.

ದಿನಾಂಕ 28.06.2025 ರಂದು ನಡೆದ ವಿಶೇಷ ಮಹಾಸಭೆಯಲ್ಲಿ ಶಾಲಾಡಳಿತ ಮಂಡಳಿಯ ಚೇರ್‌ಮನ್ ಆಯ್ಕೆಗೆ ಸಂಬಂಧಿಸಿದಂತೆ, ಸರ್ಚ್ ಕಮಿಟಿಯ ಅನುಮೋದನೆ ಬಗ್ಗೆ ಪ್ರಸ್ತಾಪಿಸಿದ್ದು, ಸಂಘದ ಪ್ರಸಕ್ತ ಸ್ಥಿತಿಗತಿಯ ಪ್ರಕಾರ, ಸಂಘದ ನಿಯಮಗಳು ಮತ್ತು ನಿಬಂಧನೆಗಳು, ಜ್ಞಾಪಕ ಪತ್ರ ಹಾಗೂ ಬೈಲಾ ತಿದ್ದುಪಡಿಯ ಅಗತ್ಯವಿದ್ದು, ಇದರ ಬಗ್ಗೆ ಮಹಾಸಭೆಯು ಸೂಚಿಸಿದ್ದು, ಬೈಲಾ ಬದಲಾವಣೆ ತರುವವರೆಗೆ ತಾತ್ಕಾಲಿಕ ಸಮಿತಿಯನ್ನು ರಚಿಸಿ ಚೇರ್‌ಮನ್ ಸ್ಥಾನವನ್ನು ಅಧ್ಯಕ್ಷರು ಮುಂದುವರಿಸಿಕೊಂಡು ಹೋಗಲು ಅನುಮತಿ ನೀಡಲಾಗಿದೆ. ಬೈಲಾ ತಿದ್ದುಪಡಿಯ ಬಗ್ಗೆ ಸದಸ್ಯರು ಆದಷ್ಟು ಬೇಗ ತಮ್ಮ ಸಲಹೆ, ಸೂಚನೆ, ಅಭಿಪ್ರಾಯಗಳನ್ನು ಸಂಘದ ಕಚೇರಿಗೆ ನೀಡಬೇಕಾಗಿ ವಿನಂತಿ.

ವಿಶೇಷ ಮಹಾಸಭೆಯಲ್ಲಿ ಬಂಟರ ಸಂಘದ ಇತಿಹಾಸದಲ್ಲೇ ಅತೀ ದೊಡ್ಡ ಯೋಜನೆಯಾದ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಂಕೀರ್ಣದ ಪುನರ್ ಅಭಿವೃದ್ಧಿಗೆ (ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–1 ಮತ್ತು ಕನ್ವೆನ್ಷನ್ ಸೆಂಟರ್) ಅನುಮತಿಯನ್ನು ನೀಡಿರುವುದಕ್ಕೆ ತಮಗೆಲ್ಲರಿಗೂ ಅಭಿನಂದನೆಗಳು. ನಮ್ಮ ಸಮಿತಿಯು ಅದರ ಬಗ್ಗೆ ಕಾರ್ಯಗಳನ್ನು ಕೈಗೆತ್ತಿಕೊಂಡಿದ್ದು, ಮುಂದಿನ ದಿನಗಳಲ್ಲಿ ತಮ್ಮ ಸಹಕಾರ, ಮಾರ್ಗದರ್ಶನವನ್ನು ಸದಾ ಬಯಸುತ್ತೇವೆ.

**ಇಂತಿ ತಮ್ಮ ಪ್ರೀತಿಯ**
**ಸಿಎ. ಅಶೋಕ್ ಶೆಟ್ಟಿ ಎಂ**
**ಅಧ್ಯಕ್ಷರು**

# ಗೌರವ ಕಾರ್ಯದರ್ಶಿಯವರ ವರದಿ



**ನಾವು ಸಮಸ್ಯೆಯನ್ನು ಪರಿಹರಿಸಲು ಕುಳಿತಾಗ ಪರಿಹಾರದ ಮೇಲೆ ಗಮನಹರಿಸಬೇಕು. ಸಮಸ್ಯೆ ಬಗ್ಗೆಯೇ ಚಿಂತಿಸುತ್ತಾ, ಯೋಚಿಸುತ್ತಾ ಕುಳಿತುಕೊಳ್ಳಬಾರದು, ಸಮಸ್ಯೆಗಿಂತ ಪರಿಹಾರವೇ ರೋಚಕ.**

**ಮಾನ್ಯ ಸದಸ್ಯರೇ,**

ಮಕ್ಕಳು ಎಳೆಯ ಸಸಿಗಳಂತೆ. ನಾವು ಹೇಗೆ ಅವರನ್ನು ಬೆಳೆಸುತ್ತೇವೆಯೋ ಮುಂದೆ ಹಾಗೇ ಅವರು ಫಲ ನೀಡುತ್ತಾರೆ. ಪೋಷಕರು ಮಕ್ಕಳಲ್ಲಿ ಸದಾ ಸಕಾರಾತ್ಮಕತೆ, ಪ್ರೇರಣೆ ತುಂಬುವಂತಹ ಮಾತುಗಳ ಮೂಲಕ ಅವರನ್ನು ಪ್ರೋತ್ಸಾಹಿಸಬೇಕು. ಸೋತಾಗ ಮತ್ತೆ ಎದ್ದು ಬರಲು, ಪ್ರಯತ್ನ ವಿಫಲವಾದಾಗ ನಿರಾಶೆಯಾಗದೆ ಮತ್ತೆ ಮತ್ತೆ ಪ್ರಯತ್ನಿಸಲು, ಸದಾ ಆತ್ಮವಿಶ್ವಾಸದಿಂದ ಇರಲು, ಹೊಸತನ್ನು ಪ್ರಯತ್ನಿಸಲು ಮಕ್ಕಳನ್ನು ಪ್ರೇರೆಪಿಸಬೇಕು. 2025–26ನೇ ಸಾಲಿನ ತರಗತಿಗಳು ಈಗಾಗಲೇ ಪ್ರಾರಂಭವಾಗಿದ್ದು, ಮಕ್ಕಳ ಸರ್ವತೋಮುಖ ಶೈಕ್ಷಣಿಕ ಅಭಿವೃದ್ಧಿಗೆ ನಮ್ಮ ಸಮಿತಿಯು ಅದ್ಯತೆಯನ್ನು ನೀಡಿದೆ.

ದಿನಾಂಕ 28.06.2025ರಂದು ನಡೆದ ವಿಶೇಷ ಸರ್ವ ಸದಸ್ಯರ ಸಭೆಯಲ್ಲಿ ನಮ್ಮ ಸಂಘದ ಮಹತ್ವಪೂರ್ಣ ಯೋಜನೆಯಾದ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಂಕೀರ್ಣದ ಪುನರ್ ಅಭಿವೃದ್ಧಿಗೆ (ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–I ಮತ್ತು ಕನ್ವೆನ್ಷನ್ ಸೆಂಟರ್) ಅನುಮತಿಯನ್ನು ಕೊಟ್ಟು, ಸೂಕ್ತ ಸಲಹೆ–ಸೂಚನೆಗಳನ್ನು ನೀಡಿದ ಎಲ್ಲರಿಗೂ ಧನ್ಯವಾದಗಳು. ಈ ಯೋಜನೆಗೆ ಸಂಬಂಧಿಸಿದಂತೆ ನಮ್ಮ ಸಮಿತಿಯು ಕಾರ್ಯನಿರತವಾಗಿದ್ದು, ಅದಕ್ಕೆ ಸಂಬಂಧಿಸಿದಂತೆ ಅಗತ್ಯವಿರುವ ಇಲಾಖೆಗಳಿಂದ ಅನುಮತಿಯನ್ನು ಹಾಗೂ ಕಾನೂನಾತ್ಮಕ ಸಲಹೆಯನ್ನು ಪಡೆದುಕೊಂಡು ತ್ವರಿತವಾಗಿ ಕಾರ್ಯ ಪ್ರವೃತ್ತಿಗೊಳಿಸಲಾಗುವುದು. ಸದಸ್ಯರೆಲ್ಲರ ಸಹಕಾರವನ್ನು ಈ ಮೂಲಕ ಬಯಸುತ್ತೇನೆ.

ದಿನಾಂಕ 05.06.2025ರಂದು ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–Iರಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಕಾರ್ಯಕ್ರಮದ ಅತಿಥಿಗಳಾಗಿ ಶ್ರೀ ಬಿನಯ್ ಕುಮಾರ್‌ರವರು ಭಾಗವಹಿಸಿದ್ದರು. ದಿನಾಂಕ 20.06.2025ರಂದು ಸಂಘದ ಆಶಾಪ್ರಕಾಶ್ ಶೆಟ್ಟಿ ಸಭಾಭವನದಲ್ಲಿ ಆಯೋಜಿಸಲಾದ ಅಂತರ್ ಶಾಲಾ ಮಟ್ಟದ Creative Writing ಸ್ಪರ್ಧೆಯಲ್ಲಿ ಒಟ್ಟು 17 ಶಾಲೆಗಳು ಭಾಗವಹಿಸುವುದರೊಂದಿಗೆ ಸ್ಪರ್ಧೆಯನ್ನು ಯಶಸ್ವಿಯಾಗಿ ನಡೆಸಲಾಯಿತು. ದಿನಾಂಕ 21.06.2025ರಂದು ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–I ಶಾಲಾ ಆವರಣದಲ್ಲಿ ವಿಶ್ವ ಯೋಗ ದಿನಾಚರಣೆ ಹಾಗೂ ವಿಶ್ವ ಸಂಗೀತ ದಿನಾಚರಣೆಯನ್ನು ಆಚರಿಸಲಾಯಿತು.

ದಿನಾಂಕ 21.06.2025ರಂದು ಮಹಿಳಾ ವಿಭಾಗದ ವತಿಯಿಂದ ಮಹಿಳೆಯರಿಗಾಗಿ 'ಮಹಿಳೆಯರ ಆರೋಗ್ಯದ' ಬಗ್ಗೆ ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು. ವಿಚಾರ ಸಂಕಿರಣವನ್ನು ಶ್ರೀ ಸಂಜೀತ್ ಶೆಟ್ಟಿ ಹಾಗೂ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರಾದ ಡಾ. ತೇಜಾವತಿಯವರು ನಡೆಸಿಕೊಟ್ಟರು. ಕಾರ್ಯಕ್ರಮವನ್ನು ಅತ್ಯಂತ ಅಚ್ಚುಕಟ್ಟಾಗಿ ಆಯೋಜಿಸಿದ ಮಹಿಳಾ ವಿಭಾಗದ ಚೇರ್‌ಪರ್ಸನ್ ಶ್ರೀಮತಿ ಯೋಗ್ಯ ಎಲ್. ರೈ, ಸಂಚಾಲಕಿ ಶ್ರೀಮತಿ ಮಲ್ಲಿಕಾ ಕೆ. ಶೆಟ್ಟಿ ಮತ್ತು ಅವರ ತಂಡಕ್ಕೆ ಅಭಿನಂದನೆಗಳು.

ಕರ್ನಾಟಕ ಮತ್ತು ಗೋವಾ ರೀಜನಲ್ ಅಂತರ್ ಶಾಲಾ ಮಟ್ಟದ ಚೆಸ್ ಪಂದ್ಯಾವಳಿಯನ್ನು ದಿನಾಂಕ 26.06.2025ರಂದು ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ –Iರ ಸಹಯೋಗದೊಂದಿಗೆ ಆಯೋಜಿಸಲಾದ ಪಂದ್ಯಾವಳಿಯಲ್ಲಿ ಒಟ್ಟು 17 ಶಾಲೆಗಳು ಭಾಗವಹಿಸಿ ಪಂದ್ಯಾವಳಿಯು ಯಶಸ್ವಿಯಾಗಿ ಜರುಗಿತು.

ಇಂತಿ ತಮ್ಮ ಪ್ರೀತಿಯ
**ವಿಜಯ್ ಜೆ. ಶೆಟ್ಟಿ ಹಾಲಾಡಿ**
ಗೌರವ ಕಾರ್ಯದರ್ಶಿ

# ರಕ್ತದಾನ ಚಟುವಟಿಕೆಗಳಲ್ಲಿ ಮನೆ ಮಾತಾಗಿರುವ ರೆಡ್ ಕ್ರಾಸ್ ಸಂಸ್ಥೆ



ಎ.ಬಿ. ಶೆಟ್ಟಿ

ರಕ್ತ ಮಾನವನ ಜೀವ ರಸ. ಮನುಷ್ಯನ ಜೀವನ ನಡೆಯುವುದೇ ಈ ಇಂಧನದಿಂದ. ಮನುಷ್ಯನ ದೇಹದಲ್ಲಿ ಇದು ಕಡಿಮೆಯಾದರೆ ಅಥವಾ ಇದು ಕಲುಷಿತವಾದರೆ ಬದುಕಿನ ಅಂತ್ಯ ಸಮೀಪಿಸಿದಂತೆ. ಕೃತ್ರಿಮ ಬುದ್ಧಿಮತ್ತೆಯವರೆಗೆ, ಚಂದ್ರನ ಮೇಲೆ ಇಳಿಯುವಷ್ಟು ವಿಜ್ಞಾನ ಮುಂದುವರಿದರೂ ಕೃತ್ರಿಮ ರಕ್ತವನ್ನು ತಯಾರಿಸುವಲ್ಲಿ ಇನ್ನೂ ಸಾಫಲ್ಯವನ್ನು ಕಾಣಬೇಕಾಗಿದೆ. ವಿಶೇಷವೆಂದರೆ, ಇದಕ್ಕೆ ಬದಲಿ ಅಥವಾ ಪರ್ಯಾಯ ವ್ಯವಸ್ಥೆಯ ಬಗೆಗೆ ವೈದ್ಯಕೀಯ ಕ್ಷೇತ್ರದಲ್ಲಿ ಗಂಭೀರ ಚಿಂತನೆ ನಡೆದ ಮಾಹಿತಿ ಕಾಣುವುದಿಲ್ಲ. ಅಂತೆಯೇ ಒಂದು ಜೀವವನ್ನು ಬದುಕಿಸಲು ಇನ್ನೊಬ್ಬರ ರಕ್ತವನ್ನು ಪಡೆಯುವ ಅನಿವಾರ್ಯತೆಗೆ ವೈದ್ಯಕೀಯ ಕ್ಷೇತ್ರ ಇನ್ನೂ ಅಂಟಿಕೊಂಡಿದೆ. ಸಾಮಾನ್ಯವಾಗಿ ಒಬ್ಬರ ರಕ್ತ ಇನ್ನೊಬ್ಬರ ರಕ್ತಕ್ಕೆ ಹೊಂದಿಕೆಯಾಗುವುದಿಲ್ಲ. ಈ ಸಮಸ್ಯೆಯನ್ನು ಪರಿಹರಿಸಲು 1901ರಲ್ಲಿ ಆಸ್ಟ್ರೀಯಾದ ಡಾ. ಕಾರ್ಲ್ ಲಾಂಡ್ ಸ್ಟೈನರ್ ಸುದೀರ್ಘ ಸಂಶೋಧನೆಯ ನಂತರ ರಕ್ತವನ್ನು ಎ ಬಿ ಒ ಗುಂಪುಗಳನ್ನಾಗಿ ವರ್ಗೀಕರಿಸಿ ರಕ್ತವನ್ನು ನೀಡುವ ಮತ್ತು ಪಡೆಯುವ ಕಾರ್ಯ ಸುಗಮವಾಗಿ ಮತ್ತು ಪರಿಣಾಮಕಾರಿಯಗಿ ಹೊಸ ದೇಹಕ್ಕೆ ಹೊಂದಿಕೆಯಾಗುವಂತಹ ವ್ಯವಸ್ಥೆಯನ್ನು ರೂಪಿಸಿದರು. ಅವರ ಈ ಘನಕಾರ್ಯಕ್ಕೆ ಅವರಿಗೆ 1930ರಲ್ಲಿ ನೋಬೆಲ್ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿತ್ತು. ರಕ್ತ ದಾನದ ಮೂಲಕ ಮನುಷ್ಯನ ಜೀವವನ್ನು ಉಳಿಸುವ ಅವರ ಈ ಮಹತ್ಕಾರ್ಯವನ್ನು ಸ್ಮರಿಸಿ ಅವರ ಜನ್ಮ ದಿನವಾದ ಜೂನ್ 14ನ್ನು ವಿಶ್ವ ರಕ್ತದಾನಿಗಳ ದಿನವೆಂದು ಜಗತ್ತಿನಾದ್ಯಂತ ಆಚರಿಸಲಾಗುತ್ತದೆ. ಯಾವುದೇ ಪ್ರತಿಫಲವನ್ನು ನಿರೀಕ್ಷಿಸದೇ, ಇನ್ನೊಬ್ಬರ ಅಮೂಲ್ಯ ಜೀವವನ್ನು ಉಳಿಸುವ ಏಕೈಕ ಉದ್ದೇಶದಿಂದ ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡುವವರಿಗೆ ಗೌರವ ಸೂಚಿಸಲು ಮತ್ತು ಕೃತಜ್ಞತೆ ಅರ್ಪಿಸಲು "ವಿಶ್ವ ರಕ್ತದಾನಿಗಳ ದಿನಾಚರಣೆ"ಯನ್ನು ಆಚರಿಸಲಾಗುತ್ತದೆ. ಈ ಕಾರ್ಯಕ್ರಮಗಳನ್ನು ವಿಶ್ವ ಸಂಸ್ಥೆ, ರೆಡ್ ಕ್ರಾಸ್ ಫೆಡರೇಷನ್ ಮತ್ತು ರೆಡ್ ಕ್ರೆಸೆಂಟ್ ಸೊಸೈಟಿ ಮುಂತಾದ ಅಂತರಾಷ್ಟ್ರೀಯ ಸಂಸ್ಥೆಗಳ ಸಹಯೋಗ ಮತ್ತು ಆಶ್ರಯದಲ್ಲಿ ನಡೆಸಲಾಗುತ್ತದೆ. ಸ್ವಯಂಪ್ರೇರಿತ ರಕ್ತದಾನಿಗಳ ಬಗೆಗೆ ಜಾಗೃತಿ ಮೂಡಿಸುವುದು, ಹೆಚ್ಚಿನ ಸಂಖ್ಯೆಯಲ್ಲಿ ಜನರು ರಕ್ತದಾನವನ್ನು ಮಾಡುವಂತೆ ಪ್ರೋತ್ಸಾಹಿಸುವುದು ಈ ಆಚರಣೆಯ ಮುಖ್ಯ ಉದ್ದೇಶ. ಅದರೊಟ್ಟಿಗೆ ರಕ್ತದಾನಿಗಳ ಜೀವನ ಆರೋಗ್ಯ ಪೂರ್ಣವಾಗಿರುವಂತೆ ನಿಗಾವಹಿಸಿ ಅವರಿಗೆ ಉತ್ತೇಜನ ನೀಡುವುದು ಮತ್ತು ಅವರ ಹೃದಯ ವೈಶಾಲ್ಯಕ್ಕೆ ಹೃತ್ಪೂರ್ವಕವಾಗಿ ಕೃತಜ್ಞತೆಯನ್ನು ಅರ್ಪಿಸಿ ಅಭಿನಂದಿಸುವುದೂ ಈ ದಿನಾಚರಣೆಯ ಹಿಂದಿನ ಉದ್ದೇಶವಾಗಿರುತ್ತದೆ.

**ರೆಡ್ ಕ್ರಾಸ್ ಸಂಸ್ಥೆ:–**

ಈ ಸಂಸ್ಥೆ ಪ್ರತಿದಿನ ರಕ್ತದಾನಿಗಳಿಂದ ರಕ್ತ ಪಡೆಯುವ ಮತ್ತು ಅವಶ್ಯಕತೆ ಉಳ್ಳವರಿಗೆ ಅದನ್ನು ನೀಡಿ ಜೀವ ಉಳಿಸುವ ಪುಣ್ಯ ಕಾರ್ಯ ನಡೆಸುತ್ತದೆ. ದಾನಗಳಲ್ಲಿ ರಕ್ತದಾನ ಶ್ರೇಷ್ಠವಾಗಿದ್ದು ಅದು ಕಾಶೀ ಯತ್ರೆಯ ಪುಣ್ಯಕ್ಕೆ ಸಮಾನ ಎನ್ನುವ ಹಿರಿಯರ ಮಾತನ್ನು ಈ ಸಂಸ್ಥೆ ಕಾಯ ವಾಚಾ ಮನಸಾ ಪಾಲಿಸುತ್ತಿದೆ. ವಿಶೇಷವೆಂದರೆ ಈ ಮಹತ್ಕಾರ್ಯದಲ್ಲಿ ಯಾರು ಯಾರಿಗೆ ರಕ್ತದಾನ ಮಾಡಿದರು ಎನ್ನುವುದು ಗೌಪ್ಯವಾಗಿ ಇರುತ್ತದೆ. ಆದರೆ ಇದರ ಮೂಲಕ ಒಬ್ಬರ ಜೀವ ಉಳಿದದ್ದು ಮಾತ್ರ ಹೊರ ಜಗತ್ತಿನ ಅರಿವಿಗೆ ಬರುತ್ತದೆ. ಅಪಘಾತ, ಹೆರಿಗೆ, ಶಸ್ತ್ರ ಚಿಕಿತ್ಸೆ, ಥಾಲ್‌ಸೀಮಿಯ, ಹಿಮೋಫೆಲಿಯ, ಡೆಂಗ್ಯೂ ಮತ್ತು ಕ್ಯಾನ್ಸರ್ ಚಿಕಿತ್ಸೆಗಳಲ್ಲಿ ರಕ್ತದ ಅವಶ್ಯಕತೆ ಹೆಚ್ಚಾಗಿ ಕಾಣುತ್ತಿದ್ದು, ಅಂತೆಯೇ ವರ್ಷಪೂರ್ತಿ ನಿರಂತರವಾಗಿ ರಕ್ತದ ಬೇಡಿಕೆ ಇರುತ್ತದೆ. ಒಬ್ಬರ ರಕ್ತವನ್ನು ಇನ್ನೊಬ್ಬರ ಜೀವವನ್ನು ಉಳಿಸಲು ಬಳಸುವ ಈ ವೈದ್ಯಕೀಯ ಸಂಶೋಧನೆ ವೈದ್ಯಕೀಯ ಶಾಸ್ತ್ರದಲ್ಲಿ ಒಂದು ಮಹತ್ವದ ಬೆಳವಣಿಗೆಯಾಗಿದ್ದು ಇದರ ಸಾಫಲ್ಯ ರಕ್ತದಾನಿಗಳ ಹೃದಯ ವೈಶಾಲ್ಯದಲ್ಲಿದೆ. ಈ ಸಂಸ್ಥೆಯ ಶೇರುದಾರರು ರಕ್ತ ದಾನಿಗಳು. ಅವರಿಲ್ಲದೆ ಈ ಸಂಸ್ಥೆ ಇರುವುದಿಲ್ಲ. ರೆಡ್ ಕ್ರಾಸ್ ಸಂಸ್ಥೆ ಈ ನಿಟ್ಟಿನಲ್ಲಿ ತನ್ನ ಸ್ವಯಂ ಸೇವಕರ ಸಹಾಯದಿಂದ ರಕ್ತದಾನ ಶಿಬಿರಗಳನ್ನು ಯೋಜಿಸುತ್ತಿದ್ದು, ಅದನ್ನು ವ್ಯವಸ್ಥೆಗೊಳಿಸುವ ಮುಂಚಿತವಾಗಿ ರಕ್ತದಾನಿಗಳನ್ನು ಸಂಪರ್ಕಿಸಿ ಅವರಿಗೆ ಮನವರಿಕೆ ಮಾಡಿಕೊಡುವ ಕಾರ್ಯವನ್ನು ಮಾಡುತ್ತದೆ. ಇದರ ಚಟುವಟಿಕೆಯಲ್ಲಿ ವಾಣಿಜ್ಯ ಆಸಕ್ತಿ ಮುನ್ನಲೆಗೆ ಬರದೇ ಕೇವಲ ಸೇವೆಯೇ ಮುಖ್ಯವಾಗಿರುತ್ತದೆ.

ರಕ್ತದಾನದ ಬಗೆಗೆ ಇಷ್ಟೇಕೆ ಮಹತ್ವ, ಒತ್ತಾಯ ಮತ್ತು ಪ್ರಚಾರ?

ನಮ್ಮ ದೇಶದಲ್ಲಿ ರಕ್ತದ ಅವಶ್ಯಕತೆಯಲ್ಲಿ ಶೇ.80ರಷ್ಟು ದಾನಿಗಳಿಂದ ದೊರಕುತ್ತಿದ್ದು, ಇನ್ನೂ 20% ಕೊರತೆ ಇದೆ. ಪ್ರತಿ 2 ಸೆಕೆಂಡ್‌ಗೆ ಒಬ್ಬರಿಗೆ ರಕ್ತ ಬೇಕು. ಪ್ರತಿದಿನ 38000–40000 ಯುನಿಟ್ ರಕ್ತದ ಅವಶ್ಯಕತೆ ಇದ್ದು, ತಾವಾಗಿಯೇ ರಕ್ತ ದಾನ ಮಾಡುವವರಿಂದ ಸುಮಾರು ಶೇ.50 ರಷ್ಟು ಅವಶ್ಯಕತೆ ನೀಗುತ್ತದೆ. ವಾರ್ಷಿಕವಾಗಿ 14.6 ಮಿಲಿಯನ್ ಯುನಿಟ್ಸ್ ರಕ್ತದ ಅವಶ್ಯಕತೆ ಭಾರತದಲ್ಲಿದೆ. ಇದು ರಕ್ತದಾನಿಗಳಿಂದ ಆಗುತ್ತಿದೆ. ಪ್ರತಿ ವರ್ಷ 30 ಮಿಲಿಯನ್ ಬ್ಲಡ್ ಕಾಂಪೋನೆಂಟ್‌ನ್ನು ಹಾಕಲಾಗುವುದು. ಪ್ರಸ್ತುತ ದೇಶದಲ್ಲಿ ಸುಮಾರು 4000 ಬ್ಲಡ್ ಬ್ಯಾಂಕ್‌ಗಳು ಇವೆ. ಒಂದು ಯುನಿಟ್ ಮೂರು ಜೀವವನ್ನು ಉಳಿಸುತ್ತದೆ. ರಕ್ತದಾನಕ್ಕೆ ಬದಲಿ ಇರುವುದಿಲ್ಲ. ಬೇಕಾದಾಗ ರಕ್ತ ದೊರಕದಿದ್ದರೆ ಬದುಕು ಅಂತ್ಯ.

ಪ್ರತಿ ವರ್ಷ ಹತ್ತು ಮಿಲಿಯನ್ ಜನರಿಗೆ ಕ್ಯಾನ್ಸರ್ ಬರುತ್ತಿದ್ದು, ಅವರಿಗೆ ಸಮಯದಲ್ಲಿ ರಕ್ತವನ್ನು ನೀಡಬೇಕಾಗುತ್ತದೆ. ಇದು ದಾನಿಗಳಿಂದ ಬರಬೇಕೆ ವಿನಃ ಅದನ್ನು ಕೃತ್ರಿಮವಾಗಿ ತಯಾರಿಸಿ ಅಂಗಡಿಯಲ್ಲಿ ಮಾರಲಾಗುವುದಿಲ್ಲ. ಇದು ಒಂದು ರೀತಿಯಲ್ಲಿ ಲೈಫ್ ಸೇವಿಂಗ್ ಡ್ರಗ್‌ನಂತೆ ಇದ್ದು ರಕ್ತ ದಾನವನ್ನು ಮಹಾದಾನವೆಂದು ಪರಿಗಣಿಸಲಾಗುತ್ತದೆ. ಸಾಮಾನ್ಯವಾಗಿ ಆಸ್ಪತ್ರೆಗಳಲ್ಲಿ ರಕ್ತ ನಿಧಿ ಇರುತ್ತಿದ್ದು, ಅದು ದೊರಕದಿದ್ದಾಗ ರಕ್ತದ ಗುಂಪನ್ನು ತಿಳಿಸಿ ಸಂಬಂಧಿಗಳು ಮತ್ತು ಸ್ನೇಹಿತರ ಮೂಲಕ ವ್ಯವಸ್ಥೆ ಮಾಡಲಾಗುತ್ತದೆ. ಎಷ್ಟೋ ಹಳ್ಳಿಗಳಲ್ಲಿ ಇದರ ಬಗೆಗೆ ಮಾಹಿತಿ ಇಲ್ಲದೇ ತೊಂದರೆ ಅನುಭವಿಸುತ್ತಾರೆ ಮತ್ತು ಈ ನಿಟ್ಟಿನಲ್ಲಿ ಶೋಷಣೆಗೆ ಒಳಗಾಗುತ್ತಾರೆ. ದೇಶದಲ್ಲಿ 5 ಲಕ್ಷ ಜನರು ಅಪಘಾತಕ್ಕೆ ಸಿಲುಕುತ್ತಿದ್ದು, ಅದರಲ್ಲಿ ಸುಮಾರು 1.50 ಲಕ್ಷ ಜನರು ರಕ್ತ ಸ್ರಾವವಾಗಿ, ರಕ್ತ ಸಿಗದೇ ಅಸು ನೀಗುತ್ತಾರೆ. ಇದನ್ನು ತಪ್ಪಿಸಲು ರಕ್ತನಿಧಿ ಮತ್ತು ರಕ್ತ ದಾನಿಗಳ ಅವಶ್ಯಕತೆ ಹಿಂದೆಂದಿಗಿಂತಲೂ ಹೆಚ್ಚಾಗಿದೆ. ಇತ್ತೀಚಿನ ಸುಪ್ರೀಮ್ ಕೋರ್ಟ್ ಆದೇಶದಂತೆ ಅಪಘಾತಕ್ಕೆ ಒಳಗಾದವರನ್ನು ಕಾನೂನು ಜಂಜಾಟವಿಲ್ಲದೆ ಆಸ್ಪತ್ರೆಗೆ ಸೇರಿಸುವ ಪ್ರಕ್ರಿಯೆ ಚುರುಕಾಗುತ್ತಿದ್ದು ತ್ವರಿತ ಚಿಕಿತ್ಸೆಗಾಗಿ ರಕ್ತದಾನಿಗಳ ಅವಶ್ಯಕತೆ ಕೂಡಾ ಹೆಚ್ಚಾಗಲಿದೆ. ಸದ್ಯ ನಮ್ಮ ರಾಜ್ಯದಲ್ಲಿ 180 ಸ್ಟೋರೇಜ್ ಕೇಂದ್ರಗಳು ಇದ್ದು ಅವುಗಳನ್ನು ಸಕ್ರಿಯಗೊಳಿಸಿ ಇಂಟರ್ ಲಿಂಕ್ ಮಾಡುವ ಅವಶ್ಯಕತೆ ಇದೆ. ಹಳ್ಳಿಗಳಲ್ಲಿ ರಕ್ತದಾನದ ಬಗೆಗೆ ಅರಿವು ಕಡಿಮೆ ಇದ್ದು, ಈ ನಿಟ್ಟಿನಲ್ಲಿ ಅವರನ್ನು ಜಾಗೃತಗೊಳಿಸುವ ಕಾರ್ಯವನ್ನು ರೆಡ್ ಕ್ರಾಸ್ ಮಾಡುತ್ತಿದೆ. ಹಾಗೆಯೇ ರಕ್ತ ದಾನಿಗಳಿಂದ ರಕ್ತ ಸಂಗ್ರಹಿಸುವ ಕಾರ್ಯವನ್ನೂ ಮಾಡುತ್ತದೆ.

ಇತ್ತೀಚಿನ ದಿನಗಳಲ್ಲಿ ಸರ್ಕಾರ ಮತ್ತು ಬೇರೆ ಬೇರೆ ಸಂಘ ಸಂಸ್ಥೆಗಳು ರಕ್ತ ನಿಧಿಯ ಬಗೆಗೆ ಹಲವಾರು ದೂರಗಾಮಿ ಮತ್ತು ಮಹತ್ವಾಕಾಂಕ್ಷಿ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದು, ಇದೊಂದು ಸ್ವಾಗತಾರ್ಹ ಬೆಳವಣಿಗೆ. ಅಂತರಾಷ್ಟ್ರೀಯ ಮತ್ತು ಭಾರತೀಯ ರೆಡ್ ಕ್ರಾಸ್ ಸಂಸ್ಥೆ ರಕ್ತದಾನದ ಬಗೆಗೆ ಯುವಕರಲ್ಲಿ ಸಾಕಷ್ಟು ಜಾಗೃತಿ ಮೂಡಿಸಿ ಅವರು ಹೆಚ್ಚಿನ ರಕ್ತದಾನ ಮಾಡುವಂತೆ ಪ್ರೇರೆಪಿಸುತ್ತಿವೆ. ಅದಕ್ಕೂ ಮಿಗಿಲಾಗಿ ಅಂತರಾಷ್ಟ್ರೀಯ ಮಟ್ಟದಲ್ಲಿ ದೇಶದ ಎಲ್ಲಾ ರಾಜ್ಯಗಳಲ್ಲಿ ದೇಶದ ಎಲ್ಲಾ ಭಾಗಗಳಲ್ಲಿ ರಕ್ತದ ಅಗತ್ಯವಿದ್ದ ಎಲ್ಲಾ ರೋಗಿಗಳಿಗೆ, ಅದರಲ್ಲೂ ಬಡ ರೋಗಿಗಳಿಗೆ ದಿನದ ನಿರಂತರ 24 ಗಂಟೆ ರಕ್ತ ಪೂರೈಸುವ ಕೆಲಸ ರೆಡ್ ಕ್ರಾಸ್‌ನ ಎಲ್ಲಾ ರಕ್ತನಿಧಿ, ರಕ್ತದಾನ ಕೇಂದ್ರದಿಂದ ದೊರಕುವಂತೆ ಈ ಸಂಸ್ಥೆಯಿಂದ ಏರ್ಪಾಡು ಮಾಡಲಾಗಿದೆ. ರಾಜ್ಯ ಹಾಗೂ ದೇಶ ಮತ್ತು ಜಗತ್ತಿನಾದ್ಯಂತ ರೆಡ್ ಕ್ರಾಸ್ ಸಂಸ್ಥೆಗಳು ನಿರಂತರವಾಗಿ ರಕ್ತದಾನ ಶಿಬಿರಗಳನ್ನು ಏರ್ಪಡಿಸಿ ರೋಗಿಗಳಿಗೆ ಆಪತ್ಕಾಲದಲ್ಲಿ ಬೇಕಾಗಿರುವ ರಕ್ತವನ್ನು ಒದಗಿಸಿ ರಕ್ತದ ಅಭಾವವನ್ನು ಸರಿದೂಗಿಸುವ ಶ್ಲಾಘನೀಯ ಪ್ರಯತ್ನ ಮಾಡುತ್ತಿವೆ. ಇತ್ತೀಚೆಗೆ ಜಗತ್ತಿನಾದ್ಯಂತ ಹಾಗೂ ನಮ್ಮ ದೇಶದಲ್ಲಿಯೂ ಕೋವಿಡ್ ಮಹಾಮಾರಿ ತಾಂಡವವಾಡುವ ಸಂದರ್ಭದಲ್ಲಿ ರಕ್ತ ನಿಧಿ ಕೇಂದ್ರಗಳು ಬರಿದಾಗುವ ಅಂಚಿನ ಅಪಾಯದಲ್ಲಿ ಇರುವಾಗ ರೆಡ್ ಕ್ರಾಸ್ ಸಂಸ್ಥೆ ಉಳಿದ ಕೆಲವು ಸಂಘ ಸಂಸ್ಥೆಗಳೊಂದಿಗೆ ಸೇರಿ ಅಂತಹ ಅಪಾಯವನ್ನು ದೂರಗೊಳಿಸಿ ಸಾವಿರಾರು ಜನರ ಜೀವ ಉಳಿಸಿದ್ದನ್ನು ಜನತೆ ಸದಾ ನೆನಪಿಸಿಕೊಳ್ಳುತ್ತಾರೆ.

ಯಾವ ತಾಯಿ ಕಣ್ಣಿಗೂ ತನ್ನ ಮಗುವಿನ ಜೀವವನ್ನು ಉಳಿಸಿಕೊಳ್ಳುವ ಶಕ್ತಿ ಇರುವುದಿಲ್ಲ. ಕೆಲವು ಬಾರಿ ಪ್ರತಿಭಾವಂತ ಅನುಭವಿ ವೈದ್ಯರಿಗೂ ಜೀವ ಉಳಿಸಲು ಸಾಧ್ಯವಾಗದೆ ಕೈ ಚೆಲ್ಲುತ್ತಾರೆ. ಆದರೆ ಈ ಜೀವ ಉಳಿಸುವ ಶಕ್ತಿ ಹಲವು ಬಾರಿ ರಕ್ತದಾನಿಗಳಲ್ಲಿ ಇರುತ್ತದೆ. ಒಬ್ಬ ಮನುಷ್ಯನ ಜೀವ ಉಳಿಸಲು ನಾವು ವೈದ್ಯರೇ ಆಗಬೇಕಾಗಿಲ್ಲ. ಆದರೆ, ರಕ್ತದಾನ ಹಲವು ಬಾರಿ ಜೀವ ಉಳಿಸುವ ಪವಿತ್ರ ಮತ್ತು ಪುಣ್ಯ ಕಾರ್ಯವನ್ನು ಮಾಡುತ್ತದೆ. ಈ ಎಲ್ಲಾ ಸಂದರ್ಭಗಳಲ್ಲಿ ಮಾನವನ ಜೀವ ಉಳಿಸುವ ಸಲುವಾಗಿ ರೆಡ್ ಕ್ರಾಸ್ ಸಂಸ್ಥೆ ಸ್ವಯಂಸೇವಕರ ನಿರಂತರ ಸೇವೆಯನ್ನು ಬಳಸಿ ರಕ್ತದಾನಿಗಳನ್ನು ಪ್ರೇರೇಪಿಸಿ

ನಿರಂತರವಾಗಿ ರಕ್ತದಾನ ಶಿಬಿರಗಳನ್ನು ಏರ್ಪಡಿಸುತ್ತದೆ. ಈ ರೀತಿ ಸಂಗ್ರಹಿಸಿದ ರಕ್ತವನ್ನು ರಕ್ತ ನಿಧಿ ಕೇಂದ್ರಗಳಲ್ಲಿ ವಿವಿಧ ಗುಂಪುಗಳಾಗಿ ವಿಂಗಡಿಸುತ್ತಾರೆ. ಪ್ರತಿ ದಿನವೂ ಲಕ್ಷಾಂತರ ರೋಗಿಗಳ ಅದರಲ್ಲೂ ಸಮಾಜದಲ್ಲಿರುವ ಬಡವರ ಮತ್ತು ಎಲ್ಲಾ ರೀತಿಯಲ್ಲಿ ಅಗತ್ಯವಿರುವ ರೋಗಿಗಳಿಗೆ ಸೂಕ್ತ ಗುಂಪಿನ ರಕ್ತವನ್ನು ಪೂರೈಸುವಲ್ಲಿ ಅವಿರತವಾಗಿ ಶ್ರಮಿಸುತ್ತಿರುವುದು ರೆಡ್ ಕ್ರಾಸ್ ಸಂಸ್ಥೆಯ ಸಮಾಜಕ್ಕೆ ನೀಡುವ ದೊಡ್ಡ ಕೊಡುಗೆ ಇದು ನಿಜಕ್ಕೂ ಪ್ರಶಂಸನೀಯ.

## Bunts' Sangha R.N.S Vidyaniketan - I
## Report on Environment Day Celebration - 2025

### Topic-Environmental Education and Sustainable Agriculture




Bunts' Sangha RNS Vidyaniketan, Bengaluru celebrated the World Environment Day with all its effervescence on 5th June, 2025. It was a day that emphasized on sustainable agricultural practices.

The memorable event was graced by Mr. Binay Kumar, a renowned Perma cultural activist as the chief guest .The Chief Guest addressed the enthusiastic gathering and enlightened them on implementing Perma culture principles in agriculture and empowering communities towards ecological sustainability and also advised to promote environmental balance and social wellbeing. The address was followed by an interactive session with the students of grade VIII to X. The day emphasized a new beginning of upholding mindful relationship with nature and to take responsibility for our shared future

It was indeed a memorable event cherished by all.

## ಅಭಿನಂದನೆಗಳು


ಶ್ರೀಮತಿ ಶ್ಯಾಮಲಾ ಶೆಟ್ಟಿ

04.07.2025ರಿಂದ 10.07.2025ರವರೆಗೆ ನಡೆಯಲಿರುವ ಏಷಿಯನ್ ಯೂತ್ ಮತ್ತು ಜೂನಿಯರ್ ರಾಷ್ಟ್ರಗಳ ಭಾರ ಎತ್ತುವ ಸ್ಪರ್ಧೆಯ ತೀರ್ಪುಗಾರರಾಗಿ ಶ್ರೀಮತಿ ಶ್ಯಾಮಲಾ ಶೆಟ್ಟಿಯವರು ಆಯ್ಕೆಯಾಗಿದ್ದಾರೆ. ಇವರು ಬೆಂಗಳೂರು ಬಂಟರ ಸಂಘದ ಜೊತೆ ಕಾರ್ಯದರ್ಶಿ, ಇಂಡಿಯನ್ ವೈಟ್‌ಲಿಫ್ಟಿಂಗ್ ಫೆಡರೇಷನ್‌ನ ಜಂಟಿ ಕಾರ್ಯದರ್ಶಿ, ಕರ್ನಾಟಕ ರಾಜ್ಯ ವೈಟ್‌ಲಿಫ್ಟಿಂಗ್ ಅಸೋಸಿಯೇಶನ್‌ನ Working President, Bangalore Urban District Weightlifting Associationನ ಕಾರ್ಯದರ್ಶಿ, ಖಜಾಂಚಿ, ಬೆಂಗಳೂರು ತುಳುಕೂಟದ ಉಪಾಧ್ಯಕ್ಷೆಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರಿಗೆ ಬಂಟರ ಸಂಘದ ಪರವಾಗಿ ಅಭಿನಂದನೆಗಳು.

ಇವರು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿ ಹಲವಾರು ಪದಕಗಳನ್ನು ಗಳಿಸಿ ತದನಂತರ ಭಾರತ ತಂಡದ ಕೋಚ್ ಆಗಿ ಹಲವಾರು ಬಾರಿ ಭಾರತವನ್ನು ಪ್ರತಿನಿಧಿಸಿದ್ದಾರೆ. ಇವರ ಸಾಧನೆಗೆ ಕರ್ನಾಟಕ ಸರಕಾರದಿಂದ ಏಕಲವ್ಯ ಪ್ರಶಸ್ತಿ ಹಾಗೂ ಜೀವನ ಪರ್ಯಂತ ಸಾಧನೆ ಪ್ರಶಸ್ತಿ ಗಳಿಸಿರುತ್ತಾರೆ.

# Bunts' Sangha RNS Vidyaniketan - I Chess Championship



Bunts' Sangha RNS Vidyaniketan had an opportunity to host its Debut Venture of Chess Championship Under the Banner KISA (Karnataka and Goa Region Zone-5) at RTB Auditorium, RNS Campus. The tournament began with an invocation followed by a welcome address by Madam, Principal, Smt. Usha Santosh. Speaking on the occasion Shri Vijay J Shetty Halady, the Hon. Secretary and Convenor of Bunts' Sangha reiterated the origin of chess and emphasised on the importance of chess as it improves the concentration and helps in logical thinking. Smt. Padmashree, Senior Principal of Vidya Soudha, and the Convener of Zone-5 congratulated our School for hosting the event and complemented for a fine ambience apt for a chess tournament

The tournament commenced with the Chief Arbiter, Mr. Manjunath instructing the chess players with rules and regulations. Out of 17 schools, under zone 5 ,180 students participated for under 14, 17, and 19 boys and girls with 7 rounds for each category.

The closing ceremony commenced with the distribution of prizes for the budding players. The Guest of Honour CA Ashok Shetty M, the Honorable Chairman and President of R.N.S Vidyaniketan congratulated the Winners and motivated them to scale higher in their future execution.

Participation and appreciation certificates were distributed to all participating schools. RNS Vidyaniketan had the Privilege to produce skilled budding players as Shreyas Angadi of 7th grade, under 14 boys, Saloni Dharnish of 7th grade, under 14 girls, Sinchana Nagarakar of under 17 girls, Saathvik R Pai of 9th grade bagging Gold and Advith Shetty of 9th grade bagging Silver have been selected to represent at the State Level. The event was conducted by proficient and qualified Arbitors [5 in number] and the tournament concluded with many memories to be cherished for the longest time.

---

## ಅಭಿನಂದನೆಗಳು



ಧನರಾಜ್ ಎಸ್. ಶೆಟ್ಟಿ

ಕುಂದಾಪುರ ತಾಲೂಕು ಕೆರಾಡಿ ಮೂಡ್ಗಲ್ಲು ನಿವಾಸಿ, ಪ್ರಕೃತಿ ಚಿಕಿತ್ಸೆ ವಿದ್ಯಾರ್ಥಿ ಧನರಾಜ್ ಎಸ್. ಶೆಟ್ಟಿಯವರು ಯೋಗದಲ್ಲಿ ಕುಕುಟಾಸನ (ರೂಸ್ಟರ್ ಭಂಗಿ)ವನ್ನು 13 ನಿಮಿಷ 41 ಸೆಕೆಂಡ್ ಕಾಲ ಮಾಡುವ ಮೂಲಕ ಈ ಹಿಂದೆ ಇದ್ದ 5 ನಿಮಿಷದ ದಾಖಲೆಯನ್ನು ಅಳಿಸಿ, ಗಿನ್ನಿಸ್ ದಾಖಲೆ ನಿರ್ಮಿಸಿದ್ದಾರೆ. ಪ್ರಸ್ತುತ ಬಿಎನ್‌ವೈಎಸ್ ಶಿಕ್ಷಣವನ್ನು ಮೈಸೂರಿನ ಸರಕಾರಿ ನೇಚರ್ ಕೇರ್ ಮತ್ತು ಯೋಗ ಮೆಡಿಕಲ್ ಕಾಲೇಜಿನಲ್ಲಿ ಮಾಡುತ್ತಿದ್ದಾರೆ. ಇವರು ಶ್ರೀ ಸಂತೋಷ್ ಶೆಟ್ಟಿ ಮತ್ತು ಶ್ರೀಮತಿ ಅನಿತಾ ಶೆಟ್ಟಿ ದಂಪತಿಗಳ ಪುತ್ರ. ಇವರಿಗೆ ಬಂಟರ ಸಂಘದ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು.

# ಬಂಟರ ಸಂಘ ಬೆಂಗಳೂರು – ಮಹಿಳಾ ವಿಭಾಗ




ಮಹಿಳಾ ವಿಭಾಗದ ವತಿಯಿಂದ ದಿನಾಂಕ 21.06.2025ರ ಶನಿವಾರ ಮಧ್ಯಾಹ್ನ 2.30 ಗಂಟೆಗೆ ಆಯೋಜಿಸಲಾದ ವಿಚಾರ ಸಂಕಿರಣ ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ನೆರವೇರಿತು. ಮಹಿಳಾ ವಿಭಾಗದ ಸದಸ್ಯೆಯರ ಬಂಟರ ಹಾಡಿನಿಂದ ಕಾರ್ಯಕ್ರಮ ಪ್ರಾರಂಭವಾಯಿತು. ಚೇರ್‌ಪರ್ಸನ್ ಶ್ರೀಮತಿ ಯೋಗ್ಯ ಎಲ್. ರೈಯವರು ಆಗಮಿಸಿದ ಎಲ್ಲರನ್ನು ಸ್ವಾಗತಿಸಿದ ಬಳಿಕ, ಶ್ರೀಮತಿ ಜಯಶ್ರೀ ಕೆ. ಶೆಟ್ಟಿಯವರು ಅತಿಥಿಗಳನ್ನು ಪರಿಚಯಿಸಿದರು. ನಂತರ ಮಧ್ಯವಯಸ್ಕ ಮಹಿಳೆಯರ ಚರ್ಚೆ ಎಂಬ ಶೀರ್ಷಿಕೆಯಡಿ ಒಂದು ಸಾರ್ಥಕ ಮತ್ತು ಶಕ್ತಿದಾಯಕ ಕಾರ್ಯಕ್ರಮ ನಡೆಯಿತು. ಇದರಲ್ಲಿ ಪೂರ್ವರಜೋ ನಿವೃತ್ತಿ (ಪ್ರೀಮೆನೋಪಾಝ್) ಎಂಬ ಮಹತ್ವದ ವಿಷಯದ ಕುರಿತು ವಿಶ್ಲೇಷಣೆ ನಡೆಸಲಾಯಿತು. ಈ ಕಾರ್ಯಕ್ರಮದ ಪ್ರಮುಖ ವಕ್ತಾರರಾಗಿ ಶ್ರೀ ಸಂಜೀತ್ ಶೆಟ್ಟಿ ಮತ್ತು ಪ್ರಸೂತಿ ಹಾಗೂ ಸ್ತ್ರೀರೋಗ ತಜ್ಞೆ ಡಾ. ತೇಜಾವತಿಯವರು ಉಪಸ್ಥಿತರಿದ್ದರು. ಅವರು 40ರ ದಶಕದ ಬಳಿಕ ಮಹಿಳೆಯರಲ್ಲಿ ಸಂಭವಿಸುವ ದೈಹಿಕ, ಭಾವನಾತ್ಮಕ ಮತ್ತು ಹಾರ್ಮೋನಲ್ ಬದಲಾವಣೆಗಳ ಬಗ್ಗೆ ವಿವರವಾಗಿ ಮಾತನಾಡಿದರು. ನಿಯಮಿತವಲ್ಲದ ಮಾಸಧರ್ಮ, ಮನೋಭಾವದ ಬದಲಾವಣೆಗಳು, ನಿದ್ರೆ ಸಮಸ್ಯೆಗಳು ಮತ್ತು ಆರೋಗ್ಯದ ಮೇಲೆ ಬರುವ ಪರಿಣಾಮಗಳನ್ನು ಹೇಗೆ ಜಾಗೃತಿಯಿಂದ ಹಾಗೂ ಆರೋಗ್ಯಪೂರ್ಣವಾಗಿ ನಿರ್ವಹಿಸಬೇಕು ಎಂಬುದರ ಕುರಿತು ಉಪಯುಕ್ತ ಸಲಹೆಗಳನ್ನು ನೀಡಿದರು. ಕಾರ್ಯಕ್ರಮವು ಮಹಿಳೆಯರಿಗೆ ತಮ್ಮ ಅನುಭವಗಳನ್ನು ಹಂಚಿಕೊಳ್ಳಲು, ಪ್ರಶ್ನೆಗಳನ್ನು ಕೇಳಲು ಮತ್ತು ಸೂಕ್ತ ಮಾರ್ಗದರ್ಶನ ಪಡೆಯಲು ಬಲವಾದ ವೇದಿಕೆಯಾಗಿತ್ತು. ಇದು ಮಾಹಿತಿ ನೀಡುವುದರ ಜೊತೆಗೆ, ಮಧ್ಯವಯಸ್ಕ ಮಹಿಳೆಯರಿಗೆ ಬೆಂಬಲ ಮತ್ತು ಆತ್ಮವಿಶ್ವಾಸವನ್ನು ತುಂಬಿದ ಸ್ಮರಣೀಯ ಸನ್ನಿವೇಶವಾಯಿತು. ಸಂಘದ ಮಹಿಳಾ ಉಪಾಧ್ಯಕ್ಷೆಯದ ಶ್ರೀಮತಿ ಕಾಂತಿ ಶೆಟ್ಟಿಯವರು ಹಾಗೂ ಜಂಟಿ ಕಾರ್ಯದರ್ಶಿಯವರಾದ ಶ್ರೀಮತಿ ಜಯಶ್ರೀ ಸಿ. ರೈಯವರು ನಮ್ಮ ಕಾರ್ಯಕ್ರಮವನ್ನು ಶ್ಲಾಘಿಸಿ ಮಹಿಳಾ ವಿಭಾಗವನ್ನುದ್ದೇಶಿಸಿ ಹಿತ ನುಡಿದರು.



ಬಂಟರ ಸಂಘದ ಉಪಾಧ್ಯಕ್ಷೆ, ಜಂಟಿ ಕಾರ್ಯದರ್ಶಿ, ಕಾರ್ಯಕಾರಿ ಸಮಿತಿ ಸದಸ್ಯೆಯರು, ಮಾಜಿ ಉಪಾಧ್ಯಕ್ಷೆಯರು, ಮಾಜಿ ಜಂಟಿ ಕಾರ್ಯದರ್ಶಿ ಹಾಗೂ ನೂರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ ಮಹಿಳಾ ಮಣಿಗಳು ಅತ್ಯುತ್ತಮ ಕಾರ್ಯಕ್ರಮವೆಂದು ಶ್ಲಾಘಿಸಿದರು. ಕಾರ್ಯಕ್ರಮದ ನಂತರ ಹೌಸಿ ಹೌಸಿ ಆಟದಲ್ಲಿ ಎಲ್ಲಾ ಮಹಿಳೆಯರು ಉತ್ಸಾಹದಿಂದ ಪಾಲ್ಗೊಂಡರು. ಸಂಚಾಲಕಿ ಶ್ರೀಮತಿ ಮಲ್ಲಿಕಾ ಕೆ. ಶೆಟ್ಟಿಯವರ ಧನ್ಯವಾದ ಸಮರ್ಪಣೆಯ ನಂತರ ಲಘು ಉಪಾಹಾರದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

**ಮಲ್ಲಿಕಾ ಕೆ. ಶೆಟ್ಟಿ**
ಸಂಚಾಲಕರು, ಮಹಿಳಾ ವಿಭಾಗ

**ಯೋಗ್ಯ ಎಲ್. ರೈ**
ಚೇರ್‌ಪರ್ಸನ್, ಮಹಿಳಾ ವಿಭಾಗ

# Bunts' Sangha R.N.S Vidyaniketan - I
# Report on Fr. George Hess SJ Memorial Literary Competition, 2025




The prestigious Father George Hess SJ Memorial Competition, 2025, by the Association of Schools for The Indian School Certificate (ASISC) was organised for the ICSE (Indian Certificate of Secondary Education) Schools of Zone 5.

Bunts' Sangha RNS Vidyaniketan was chosen as the privileged institution to host the Zone 5 Creative Writing Competition. The event was conducted on 20th June, Saturday 2025 at the Bunts' Sangha Seminar Hall. The creative competition witnessed an overwhelming response, with thirty schools across zone 5 registering for the acclaimed event.




The number of students participating in the junior category were fifteen and twelve respectively for the sub-junior category. The illustrious event commenced with a prayer in the form of a melodious rendition followed by a welcome note.

The event was graced by Shri. C.A Ashok Shetty, President of Bunts' Sangha, Bengaluru., Shri Vijay. J Shetty Halady, Secretary of Bunts' Sangha, Bengaluru and Convenor, RNS Vidyaniketan and Madam Principal Smt. Usha Santosh. The dignitaries shared their words of wisdom and encouraged the enthusiastic participants to deliver their best performance.

As per the norms of the competition, the topics of the Creative Writing Competition for the junior and the sub junior categories were announced thirty minutes before the scheduled writing time, whereby the participants were provided with an initial time of preparation and the duration of the writing time was for ninety minutes. The total marks for the competition

were allotted as fifty marks. The participants of the junior category were required to attempt the creative writing with words not exceeding four hundred and the junior category with words not exceeding three hundred. The topic specified for the junior category was "I woke up in the year 2125" and for the sub junior category was "The day you discovered you had unique abilities".

The competition concluded with a valedictory function wherein the results of the competition were announced. The winners were awarded with medals and certificates. The participants bagging the first position were presented with a set of books authored by William Shakespeare for the junior category and by Albert Einstein for the sub junior category in addition to the medals and certificates. All the non-winning participants were awarded with a participation certificate.

The Vote of thanks marked an end to the most exemplary Creative Writing Competition, 2025.

## Bunts' Sangha R.N.S Vidyaniketan - I
## Report on Inter School Yoga Competition, CBSE




We are happy to report that eleven of our students participated in the Inter school Competition held at School of India on 28th June 2025. Our team performed exceptionally well and represented the School with great discipline and confidence.

CBSE yoga Instructor Smt. Mala had mentored the students and accompanied them for this event.

We are delighted to share the names of the winners:

1. Hitesh G won First Place in Traditional-Individual and I place in Artistic Solo U-14.
2. A Shriya Rao won Third Place in Traditional-Individual and III place in Artistic Solo U-14.

The event provided a valuable learning experience for the students.

# ಬಂಟರ ಸಂಘ ಬೆಂಗಳೂರು
# ವೈದ್ಯಕೀಯ ಮತ್ತು ವಿಮಾ ಸಮಿತಿ – 2024–26



ಉಡುಪಿ ಜಿಲ್ಲೆ ಬೈಂದೂರು ತಾಲ್ಲೂಕು ಹೊಸೂರಿನ ಕುಮಾರಿ ರಶ್ಮಿತಾ ಶೆಟ್ಟಿಯವರು ಸುಟ್ಟಗಾಯದಿಂದ ಮಣಿಪಾಲ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಅವರ ಚಿಕಿತ್ಸೆಗಾಗಿ ಬೆಂಗಳೂರು ಬಂಟರ ಸಂಘದ ವೈದ್ಯಕೀಯ ಸಮಿತಿ, ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರು ನೀಡಿದ ಧನಸಹಾಯ ಸೇರಿ ಒಟ್ಟು ಮೊತ್ತ ರೂಪಾಯಿ 55,500/– ಚೆಕ್‌ನ್ನು ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರ ಸಮ್ಮುಖದಲ್ಲಿ ಅವರ ಸಂಬಂಧಿಗೆ ಸಂಘದ ಕಛೇರಿಯಲ್ಲಿ ನೀಡಲಾಯಿತು. ಬಂಟರ ಸಂಘದ ಅಧ್ಯಕ್ಷರಾದ ಸಿ.ಎ. ಅಶೋಕ್ ಶೆಟ್ಟಿ ಎಂ., ಗೌರವ ಕಾರ್ಯದರ್ಶಿ ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿ, ಜಂಟಿ ಕಾರ್ಯದರ್ಶಿ ಶ್ರೀಮತಿ ಜಯಶ್ರೀ ಸಿ. ರೈ, ಖಜಾಂಚಿ ಶ್ರೀ ಅಶೋಕ್ ಕುಮಾರ್ ಶೆಟ್ಟಿ ಹೆಚ್., ವೈದ್ಯಕೀಯ ವಿಭಾಗದ ಅಧ್ಯಕ್ಷರಾದ ಶ್ರೀ ಪ್ರಶಾಂತ್ ಶೆಟ್ಟಿ ಎಸ್. ಮತ್ತು ಕಾರ್ಯಕಾರಿ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

**ಸುಪ್ರೀತ್ ಶೆಟ್ಟಿ**
ಸಂಚಾಲಕರು, ವೈದ್ಯಕೀಯ ಸಮಿತಿ

**ಪ್ರಶಾಂತ್ ಶೆಟ್ಟಿ ಎಸ್.**
ಚೇರ್‌ಪರ್ಸನ್, ವೈದ್ಯಕೀಯ ಸಮಿತಿ

## Auditorium Booking Status as on 07.07.2025

| S.N. | Booking date | Prog. date | Party name | Booking Category Member/Non Member | Prog. Details |
|---|---|---|---|---|---|
| 1 | 06-05-2025 | 10-12-2025 | Suhas | Non-Member | Beegara Oota |
| 2 | 20-6-2025 | 21-06-2025 | Rajashekar Ganiger | Non-Member | Social service |
| 3 | 26-6-2025 | 02-08-2025 | Vijayanagar Educational Academy | Non-Member | Social service |
| 4 | 07-02-2025 | 08-09-2025 | Bhaskar Nayak | Non-Member | Social service |
| 5 | 30-6-2025 | 14-09-2025 | Nadavara Samaja Bangalore | Non-Member | Social service |
| 6 | 21-6-2025 | 03-12-2025 | Srujana padma | Non-Member | Beegara Oota |
| 7 | 07-02-2025 | 15-07-2025 | BSRNSV-I | School Prog. | Talents'day |
| 8 | 07-02-2025 | 26-11-2025 | Ramachandraiah H C | Non-Member | Beegara Oota |
| 9 | 07-05-2025 | 09-07-2025 | Tulunada Jawaner Bengaluru | Non-Member | Coastal organizations |
| 10 | 07-05-2025 | 31-08-2025 | Janahitha Credit Co-Op. Society | Non-Member | Social service |
| 11 | 07-07-2025 | 01-12-2025 | T S Manohar Rai | Member | Wedding |
| 12 | 07-07-2025 | 16-07-2025 | Mohan R Shetty | Member | Uttarakriye |

# Academic Excellence, Congratulations!
# PUC/ 12th Std. Achiever



**Greeshma N. Shetty**
D/o Nagaraj Shetty & Vijayalakshmi
**PUC (Sc.)-97.5% |Sanskrit-100**
**Christ Academy PU College, Bangalore**



**Shamith R. Shetty**
S/o Rajashekar S. & Veena B.S.
**PUC (Sc.)- 95.5%**
**RV PU College, Bangalore**



**Ankush R. Shetty**
S/o Ravindra Shetty & Parimala R. Shetty
**PUC (Sc.) - 94.5%**
**Excellent PU College Sunnari, Kundapura**



**Mitha M. Shetty**
D/o Mohana Kallamottu & Supriya Rai S.
**CBSE (Sc.) - 94.20%**
**Psychology-100**
**Sri Sri Ravishankar Vidya Mandir, Bangalore**

# Academic Excellence, Congratulations!
# SSLC / 10th STD Toppers



**Sanvith S Shetty**

S/o Surendra Shetty Hadali
&Sunitha S Shetty
**SSLC -96.6%**
**Vidhyaranya English medium school, Kundapura**

# ಬಂಟರ ಸಂಘ ಬೆಂಗಳೂರು
# ವಿವಾಹ ವೇದಿಕೆ ಸಮಿತಿ
# "ಬಂಧ – ಅನುಬಂಧ" – ರಕ್ಷಾ ಬಂಧನ ಕಾರ್ಯಕ್ರಮ

**ಆತ್ಮೀಯ ಸಮಾಜ ಬಾಂಧವರೇ,**

ಬೆಂಗಳೂರು ಬಂಟರ ಸಂಘದ ವಿವಾಹ ವೇದಿಕೆ ಸಮಿತಿಯು ವೈವಾಹಿಕ ಸಂಬಂಧಗಳನ್ನು ಬೆಸೆಯುವ ದಿಸೆಯಲ್ಲಿ ಕಳೆದ ಕೆಲವು ವರ್ಷಗಳಿಂದ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದೆ.

ಈ ನಿಟ್ಟಿನಲ್ಲಿ ದಿನಾಂಕ 09.08.2025 ನೇ ಶನಿವಾರ ಸಂಜೆ 4.30 ರಿಂದ 6.30 ರವರೆಗೆ ಬಂಟರ ಸಂಘದ ಆಶಾ ಪ್ರಕಾಶ್ ಶೆಟ್ಟಿ ಭವನದ ಮಿನಿ ಹಾಲ್‌ನಲ್ಲಿ 'ರಕ್ಷಾ ಬಂಧನ' ದಿನದಂದು ವಿವಾಹ ವೇದಿಕೆ ಸಮಿತಿಯ ವತಿಯಿಂದ 'ಮದುವೆ' ಎಂಬ ಮಹತ್ಕಾರ್ಯದಲ್ಲಿ ಸಹೋದರರ ಪಾತ್ರದ ಮಹತ್ವವನ್ನು ನೆನೆದು, ಪ್ರೀತಿ ಮತ್ತು ಧನ್ಯತಾ ಭಾವ ಅರ್ಪಿಸುವ 'ರಕ್ಷಾ ಬಂಧನ' ಕಾರ್ಯಕ್ರಮವನ್ನು ಆಯೋಜಿಸಿದ್ದೇವೆ.

'ಮದುವೆ' ಎಂಬ ಮಹೋನ್ನತ ಕಾರ್ಯಕ್ರಮದಲ್ಲಿ ಸಹೋದರರ ಪಾತ್ರ ಬಹಳ ಮುಖ್ಯ ಮತ್ತು ಮಹತ್ವವಾದದ್ದು. ಅಕ್ಕ–ತಂಗಿಯರಿಗೋಸ್ಕರ ತಮ್ಮ ವೃತ್ತಿ, ಜೀವನವನ್ನು ತ್ಯಾಗ ಮಾಡಿ ಅವರ ಬದುಕನ್ನು ಹಸನಾಗಿಸಲು ತಮ್ಮ ಜೀವನವನ್ನೇ ಮುಡಿಪಾಗಿಡುತ್ತಾರೆ. ಅಂತಹ ಸ್ಮರಣೀಯ ಸಹೋದರರನ್ನು ಧನ್ಯತಾ ಭಾವದಿಂದ ನೆನೆದು, ಅವರ ರಕ್ಷೆಯನ್ನು ಬೇಡುತ್ತಾ, ರಕ್ಷಾ ಬಂಧನ (ರಾಕಿ) ಕಟ್ಟುವುದರೊಂದಿಗೆ ಅವರ ಆಶೀರ್ವಾದವನ್ನು ಬಯಸುತ್ತಾ, ಅವರಿಗೆ ಶುಭ ಹಾರೈಕೆಗಳನ್ನು ನೀಡುವುದರೊಂದಿಗೆ ಕೃತಜ್ಞತೆಯನ್ನು ಸಲ್ಲಿಸುವ ಸಲುವಾಗಿ ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ.

